ಕರ್ನಾಟಕ ಸರ್ಕಾರ

ಸಂಖ್ಯೆ ಇಂಇ 7 ವಿಮಂಸಾ 90

ಕರ್ನಾಟಕ ಸರ್ಕಾರದ ಸಚಿವಾಲಯ
ಬಹುಮಹಡಿ ಕಟ್ಟಡ
ದಿನಾಂಕ 6.12.91 ಬೆಂಗಳೂರು

ಸುತ್ತೋಲೆ

ವಿಷಯ: ಗ್ರಾಮೀಣ ಪ್ರದೇಶಗಳಲ್ಲಿ ವಾಸವಾಗಿರುವ ಅಲೆಮಾರಿ ಅರೆಅಲೆಮಾರಿ ಜನಾಂಗದವರಿಗೆ ಭಾಗ್ಯ ಜ್ಯೋತಿ ಯೋಜನೆಯಡಿಯಲ್ಲಿ ಶೇ 10. ರಷ್ಟು ಮೀಸಲಾತಿ ಸೌಲಭ್ಯ ನೀಡುವ ಬಗ್ಗೆ.

ಉಲ್ಲೇಖ: ಸರ್ಕಾರದ ಪತ್ರ ಸಂಖ್ಯೆ ಇಂಇ 47 ಇಇಬಿ 89 ದಿನಾಂಕ 11-09-1991

ಅಲೆಮಾರಿ: ಅರೆ ಅಲೆಮಾರಿ ಜನಾಂಗದವರಿಗೆ ಅವರು ಲಭ್ಯವಿರುವ ಗ್ರಾಮಾಂತರ ಪ್ರದೇಶಗಳಲ್ಲಿ ಶೇ 10 ಭಾಗಕ್ಕಿಂತ ಕಡಿಮೆ ಇಲ್ಲದೆ ಭಾಗ್ಯಜ್ಯೋತಿ ಯೋಜನೆಯಡಿಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು ಸರ್ಕಾರವು ಈ ಮೂಲಕ ನಿರ್ದೇಶಿಸಿದೆ.

ಸಹಿ
(ಸಿ.ಪಿ. ಶೇಷಾದ್ರಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

1. ಅಧ್ಯಕ್ಷರು, ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿ, ಕಾವೇರಿ ಭವನ, ಬೆಂಗಳೂರು 560 009.
2. ಮುಖ್ಯಮಂತ್ರಿಯವರ– ಕಾರ್ಯದರ್ಶಿಯವರಿಗೆ.
3. ಎಲ್ಲಾ ವಿಭಾಗಾಧಿಕಾರಿಗಳಿಗೆ.
4. ಎಲ್ಲಾ ಜಿಲ್ಲಾಧಿಕಾರಿಗಳಿಗೆ.
5. ಎಲ್ಲಾ ಜಿಲ್ಲಾ ಪರಿಷತ್ ಮುಖ್ಯಕಾರ್ಯದರ್ಶಿಗಳಿಗೆ.
6. ಇಂಧನ ಸಚಿವರ ಆಪ್ತಕಾರ್ಯದರ್ಶಿಯವರಿಗೆ.
7. ರಕ್ಷಾ ಕಡತ.

ಗೃಹ ರಕ್ಷಕ ದಳದವರಿಗೆ ನೀಡುವ ಉಚಿತ ಬಸ್‌ಪಾಸ್‌ಗಳ ಬಗ್ಗೆ.

493 (908). ಶ್ರೀ ಎಂ. ನಾರಾಯಣಸ್ವಾಮಿ (ಚೇಳಮಂಗಲ):- ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ;

ಅ) ರಾಜ್ಯ ಸರ್ಕಾರವು ಎಷ್ಟು ಜನ ಗೃಹರಕ್ಷಕ ದಳದವರಿಗೆ ಉಚಿತ ಬಸ್‌ಪಾಸ್ ನೀಡಿದೆ?

ಆ) ಈ ಉಚಿತ ಬಸ್‌ಪಾಸ್ ನೀಡಲು ಸರ್ಕಾರ ಅನುಸರಿಸುವ ನಿಯಮಗಳೇನು?

ಇ) ಇದರಿಂದ ಸರ್ಕಾರಕ್ಕೆ ತಗಲುವ ವೆಚ್ಚವೆಷ್ಟು?

ಶ್ರೀ ಆಜೀಜ್ ಸೇಠ್ (ಗೃಹ ಸಚಿವರು):-

ಅ) ಗೃಹರಕ್ಷಕ ದಳದವರಿಗೆ ಉಚಿತ ಪಾಸುಗಳನ್ನು ನೀಡಿರುವುದಿಲ್ಲ.

ಆ) ಕರ್ತವ್ಯನಿರತ ಸಮಯದಲ್ಲಿ ಧರಿಸಿದ ಗೃಹರಕ್ಷಕ ದಳದವರಿಗೆ ನಗರ ಸಾರಿಗೆಗಳಲ್ಲಿ ಉಚಿತವಾಗಿ ಪ್ರಯಾಣ ಮಾಡಲು ಅನುಮತಿ ಕೊಡಲಾಗಿದೆ.

ಇ) 1991-92ನೇ ಸಾಲಿನಲ್ಲಿ 15.88 ಲಕ್ಷ ರೂಗಳ ನಷ್ಟವನ್ನು ಅಂದಾಜು ಮಾಡಲಾಗಿದೆ.